ಅಧ್ಯಕ್ಷರು : ಅದು ಬೇರೆ ಪ್ರಶ್ನೆಯೇ ಆಗುತ್ತದೆ. ಆದರೆ ಸಲಹೆ ಬಹಳ ಉತ್ತಮವಾದುದಾಗಿದೆ. ನೀವು ಯಾವಾಗಲಾದರೂ ಮಾನ್ಯ ಮಂತ್ರಿಗಳನ್ನು ಮಿಟ್ ಮಾಡಿ ಡಿಸ್‌ಕಸ್ ಮಾಡಿ. It is a good suggestion.

ಅಧ್ಯಕ್ಷರು : ಎರಡನ್ನೂ ಒಟ್ಟಿಗೇ ಕೇಳಿ. ಮಂತ್ರಿಗಳು ಉತ್ತರ ಕೊಡುತ್ತಾರೆ.

ಮಂಡ್ಯ ಜಿಲ್ಲೆಯ ರಸ್ತೆಗಳ ದುರಸ್ತಿ

20 : ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿದ ಎಲ್ಲಾ ರಸ್ತೆಗಳು ಬಹಳ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ರಸ್ತೆಗಳನ್ನು ದುರಸ್ತಿ ಪಡಿಸಲು ಸರ್ಕಾರದವರು ಯಾವುದಾದರೂ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆಯೇ;

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಗೆ ಸೇರಿರುವ 1057 ಕಿ.ಮೀ. ಉದ್ದದ ರಸ್ತೆಗಳು ವಾಹನ ಸಂಚಾರಕ್ಕೆ ಅಡಚಣೆ ಆಗುವಷ್ಟು ಕೆಟ್ಟಿರುವುದಿಲ್ಲ, ಆದರೆ ಕೆಲಭಾಗದಲ್ಲಿ ಕೆಟ್ಟಿರುತ್ತದೆ.

ಆ) ಪ್ರಸಕ್ತ ಈ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಇರುವ ಪ್ರದೇಶದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಅಭಿವೃದ್ಧಿಗಾಗಿ ಅತಿ ಅಗತ್ಯವಿರುವ ಕಡೆ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ. ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸುವುದಕ್ಕೂ ಸಹ ಪ್ರತ್ಯೇಕವಾಗಿ ಅನುದಾನವನ್ನು ನಿಗದಿಪಡಿಸಿ, ರಸ್ತೆಯ ಅಭಿವೃದ್ಧಿ ಕ್ರಮವನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ರಸ್ತೆಗಳ ದುರಸ್ತಿ

20ಎ - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಶ್ರೀ ಜಿ.ಬಿ. ಶಿವಕುಮಾರ್ (ಕೆರೆಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಸೇರಿದ ರಸ್ತೆಗಳು ಬಹಳ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಇಂತಹ ರಸ್ತೆಗಳನ್ನು ದುರಸ್ತಿಪಡಿಸಲು ಸರ್ಕಾರ ಯಾವುದಾದರೂ ವಿಶೇಷ ಕಾರ್ಯಕ್ರಮವನ್ನು ರೂಪಿಸಿದೆಯೇ?*

ಶ್ರೀ ಶಿವಾನಂದ ಹೆಚ್ ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಅಸ್ತಿತ್ವದಲ್ಲಿರುವ ಪ್ರದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸೇರಿರುವ 2939 ಕಿ.ಮೀ. ಉದ್ದದ ರಸ್ತೆಗಳು ವಾಹನ ಸಂಚಾರಕ್ಕೆ ಅಡಚಣೆಯಾಗುವಷ್ಟು ಕೆಟ್ಟಿರುವುದಿಲ್ಲ, ಆದರೆ ಕೆಲಭಾಗದಲ್ಲಿ ಕೆಟ್ಟಿರುತ್ತದೆ.

ಅ) ಪ್ರಸಕ್ತ ಈ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಇರುವ ಪ್ರದೇಶದ ವ್ಯಾಪ್ತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಯಲ್ಲಿ ಅತೀ ಅಗತ್ಯವಿರುವ ಕಡೆ ರಸ್ತೆಯ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ ಹಾಗೂ ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರದೇಶ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ವಿಶೇಷವಾಗಿ ಅಭಿವೃದ್ಧಿ ಪಡಿಸುವುದಕ್ಕೂ ಸಹ ಪ್ರತ್ಯೇಕವಾಗಿ ಅನುದಾನವನ್ನು ನಿಗಧಿಪಡಿಸಿ, ರಸ್ತೆಯ ಅಭಿವೃದ್ಧಿ ಕ್ರಮವನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿದೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು 1057 ಕಿ.ಮೀ. ಉದ್ದ ಇರತಕ್ಕ ಈ ರಸ್ತೆಯ ಕೆಲವು ಭಾಗಗಳು ಕೆಟ್ಟಿದೆ ಎಂದು ಹೇಳುತ್ತಿದ್ದಾರೆ. ಎಷ್ಟು ಭಾಗ ಕೆಟ್ಟಿದೆ? ಇದಕ್ಕೆ ವಿಶೇಷವಾಗಿ ಸಪರೇಟ್ ಅನುದಾನವನ್ನು ನೀಡುತ್ತೇವೆ ಎಂದು ಹೇಳಿದ್ದಾರೆ. ಹಾಗಿದ್ದರೆ ಎಷ್ಟು ಅನುದಾನವನ್ನು ನೀಡುತ್ತೀರಿ? ಯಾವಾಗ ಇದನ್ನು ರಿಪೇರಿ ಮಾಡಿಸಿಕೊಡುತ್ತೀರಿ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಂಡ್ಯ ಜಿಲ್ಲೆಯಲ್ಲಿ 3 ಸಕ್ಕರೆ ಕಾರ್ಖಾನೆಗಳು ಬರುತ್ತವೆ. ಆ ಸಕ್ಕರೆ ಕಾರ್ಖಾನೆಗಳ ಕಮಾಂಡ್ ಏರಿಯಾದಲ್ಲಿ ಬರುವಂತಹ ರಸ್ತೆಗಳು ಹಾಳಾಗಿರುವ ಸಂಗತಿ ನಿಜ ಇದೆ. ಅದರ ಸಲುವಾಗಿ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿ 8 ಕೋಟಿ ರೂಪಾಯಿಗಳನ್ನು ಸೆಪರೇಟಾಗಿ ಸಕ್ಕರೆ ಕಾರ್ಖಾನೆಗಳ ಕಮಾಂಡ್ ಏರಿಯಾದಲ್ಲಿ ಬರುವಂತಹ ರಸ್ತೆಗಳ ರಿಪೇರಿಗಾಗಿ ಇಡಲಾಗಿದೆ. ಆ ಹಣದಿಂದ ಈ ಸಕ್ಕರೆ ಕಾರ್ಖಾನೆಗಳ ಕಮಾಂಡ್ ಏರಿಯಾದಲ್ಲಿ ಬರತಕ್ಕ ಎಲ್ಲ ರಸ್ತೆಗಳನ್ನು ಹಂತ ಹಂತವಾಗಿ ನಾವು ದುರಸ್ತಿ ಮಾಡಲಾಗುವುದು. ಈ ಮಂಡ್ಯ ಜಿಲ್ಲೆಯ ಈ ರಸ್ತೆಗಳನ್ನೂ ಸಹಿತ ಈ ಹಣದಲ್ಲಿ ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ.ಬಿ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ ಈ ಲೋಕೋಪಯೋಗಿ ಸಚಿವರು ಕೊಟ್ಟಿರತಕ್ಕಂತಹ ಉತ್ತರದ ಜೊತೆಗೆ ನನ್ನ ಪ್ರಶ್ನೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತಿ ರಾಜ್ಯ ಮಂತ್ರಿಗಳಿಗೂ ಸಂಬಂಧಪಟ್ಟದ್ದುದು ಎಂದು ನನ್ನ ಭಾವನೆ. ಏಕೆಂದರೆ, ಅವರು ಕೊಟ್ಟಿರತಕ್ಕ ಉತ್ತರದಲ್ಲಿ ಸ್ವಲ್ಪ ಭಾಗ ಕೆಟ್ಟಿದೆ ಎಂದು ಮೊದಲನೆಯ ಉತ್ತರಕೊಟ್ಟಿದ್ದಾರೆ. ಅಂದರೆ ಸುಮಾರು 2939 ಕಿ.ಮಿ. ರಸ್ತೆ ಎಂದು ಇದೆ. ಅವೆಲ್ಲವೂ ಲೋಕೋಪಯೋಗಿ ಇಲಾಖೆಗೆ ಸೇರಿದ್ದಲ್ಲ. ಕೆಲವು ಮುಕ್ಯವಾಗಿರತಕ್ಕ ರಸ್ತೆಗಳು ಲೋಕೋಪಯೋಗಿ ಇಲಾಖೆಗೆ ಸೇರಿದ್ದರೆ, ಗ್ರಾಮೀಣ ಪ್ರದೇಶದಲ್ಲಿರತಕ್ಕಂದದ್ದು ಪಂಚಾಯಿತಿ ರಾಜ್ಯ ವ್ಯವಸ್ಥೆಯಲ್ಲೇ ಇದೆ, ಅಲ್ಲಿ ಸಾಕಷ್ಟು ರಸ್ತೆಗಳು ದುರಸ್ತಿ ಆಗಬೇಕಾಗಿದೆ. ಪ್ರತ್ಯೇಕವಾಗಿ ನಮಗೆ ಕೊಟ್ಟಿರತಕ್ಕ ಹಣ ಸಹ ಈ ಸಾರಿ ಕೇವಲ ಕ್ರಿಯಾ ಯೋಜನೆಯಲ್ಲಿ 20 ಪರ್ಸೆಂಟ್ ಕೆಲಸ ಸೇರಿಸಲಿಕ್ಕೂ ಹಣ ಇಲ್ಲ ಅಲ್ಲಿ ಗ್ರಾಮೀಣ ಪ್ರದೇಶದಲ್ಲಿರತಕ್ಕ ರಸ್ತೆಗಳು ಅತ್ಯಂತ ಕೆಟ್ಟಿವೆ, ಇದಕ್ಕೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಿಂದ ಸ್ಪಷ್ಟರಾಗಿ ಉತ್ತರವನ್ನು ನಿರೀಕ್ಷಣೆ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ. ಈ ಪ್ರಶ್ನೆ ನನ್ನ ಇಲಾಖೆಗೆ ಸಂಬಂಧಪಟ್ಟಿದೆ ಎಂಬುದಾಗಿ ನಮೂದಿಸದೆ ಇರುವುದರಿಂದ ಸ್ವಲ್ಪ ಗೊಂದಲವಾಗಿದೆ. ಆದರೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಹಾಗೆ ಗ್ರಾಮೀಣ ಪ್ರದೇಶದ ರಸ್ತೆಗಳು ತುಂಬಾ ಹಾಳಾಗಿದ್ದರೆ, ಕ್ರಿಯಾ ಯೋಜನೆಗೆ ಈಗಾಗಲೇ ಒಪ್ಪಿಗೆಯನ್ನು ತೆಗೆದುಕೊಂಡಿದ್ದರೆ, ಉದ್ಯೋಗ ಭರವಸೆಯ ಯೋಜನೆಯಡಿಯದಲ್ಲಿ ಇದನ್ನು ತೆಗೆದುಕೊಳ್ಳಬಹುದು. ಸುಮಾರು 1ಕೋಟಿ ರೂಪಾಯಿಗಳವರೆಗೆ ಒಂದು ತಾಲ್ಲೂಕಿನಲ್ಲಿ ಖರ್ಚು ಮಾಡುವುಕ್ಕೆ ಅವಕಾಸ ಇದೆ. ಆದ್ದರಿಂದ ಉದ್ಯೋಗ ದೃಢೀಕರಣಯೋಜನೆಯಲ್ಲಿ ಈರೀತಿ ಹಾಳಾಗಿರತಕ್ಕ ರಸ್ತೆಗಳ ಬಗ್ಗೆ ಅವರು ನಿಖರವಾಗಿ ರಸ್ತೆಯ ಹೆಸರು, ಊರು ಇವುಗಳನ್ನು ಬರೆದು

ನನಗೆ ಕಳುಹಿಸಿಕೊಟ್ಟರೆ ಖಂಡಿತವಾಗಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ನಾನು ಸಂಬಂಧಪಟ್ಟವರಿಗೆ ಸೂಚನೆ ಕೊಡುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ : ಈ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ. ನೀವಾದರಿ ಇಲಾಖೆಗೆ ಸೇರಿರತಕ್ಕ ರಸ್ತೆಗಳೂ ಸಹ ನಮ್ಮ ಜಿಲ್ಲಾ ಪಂಚಾಯಿತಿ ವ್ಯವಸ್ಥೆ ಬಂದ ಮೇಲೆ ಸೇರಿಕೊಂಡಿವೆ. ಹಿಂದೆ ಹಲವಾರು ಸಾರಿ ಈ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ನೀರಾವರಿ ನಾಲೆ ಬಯಲು ಇದೆ. ಆಪ್ರದೇಶದ ರಸ್ತೆಗಳನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿದರೆ ಅವರು ಅವುಗಳನ್ನು ದುರಸ್ತಿ ಮಾಡುವುದಕ್ಕೆ ಒಳ್ಳೆಯದು ಎಂಬ ಸಲಹೆ ಬಂದಿತ್ತು. ಇವತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕ ನಾಲಾ ಪಕ್ಕದಲ್ಲಿ ಬರತಕ್ಕ ರಸ್ತೆಗಳನ್ನು ವಾಪಸ್ಸು ನೀರಾವರಿ ಇಲಾಖೆಗೆ ಕೊಟ್ಟರೆ ಬಹುಶಃ ಅವರಿಂದಲಾದರೂ ಕೂಡ ಈ ರಸ್ತೆಗಳು ಸ್ವಲ್ಪ ಮಟ್ಟಿಗೆ ದುರಸ್ತಿಯಾಗುತ್ತವೆ. ಇವೆಲ್ಲವನ್ನೂ ನಿರ್ವಹಿಸುವಷ್ಟು ಹಣವನ್ನು ನೀರು ಒದಗಿಸುವುದಕ್ಕಾಗುತ್ತಿಲ್ಲ, ಇದನ್ನು ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇವೆ. ಆ ಬಗ್ಗೆ ಸರ್ಕಾರದಿಂದ ಒಂದು ಸ್ಪಷ್ಟವಾದ ತೀರ್ಮಾನ ಮುಂದಾದರೂ ಬರಲಿ ಎಂದು ನಿರೀಕ್ಷಿಸುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ. ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಮೂರು ಇಲಾಖೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ಮಾಡುತ್ತಿವೆ. ಮುಳುಗಡೆ ಏರಿಯಾಗಳಲ್ಲಿ ಮಾಡತಕ್ಕದ್ದು ರಸ್ತೆ ಜಿಲ್ಲಾಪರಿಷತ್‌ನವರು ಮಾಡತಕ್ಕದ್ದು ಲೋಕೋಪಯೋಗಿ ಇಲಾಖೆಯವರು ಮಾಡತಕ್ಕದ್ದು ಕೆಲವು ಶ್ರೀಮಂತವರ್ಗದವರು ರಸ್ತೆ ಮಾಡತಕ್ಕ ಜಾಗದಲ್ಲಿ ತಗಲತಕ್ಕ ಖರ್ಚಿನಲ್ಲಿ ಅರ್ಧಭಾಗ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಆದರೆ ಅವರ ವಾದ ಏನೆಂದರೆ, ಆ ರಸ್ತೆ 10-12 ಕಿಲೋಮೀಟರ್ ಉದ್ದ ಇರಬಹುದು ಅದನ್ನು ಒಂದೇ ಸಾರಿ ಸಂಪೂರ್ಣವಾಗಿ ನೀವು ಮಾಡಿಕೊಡುವುದಾದರೆ ಆ ರಸ್ತೆಗೆ ತಗಲತಕ್ಕ ಪೂರ್ಣ ವೆಚ್ಚದಲ್ಲಿ ಅರ್ಧ ವೆಚ್ಚವನ್ನು ನಾವು ಕೊಡುತ್ತೇವೆಂದು ಮುಂದೆ ಬಂದಿರತಕ್ಕ ಈ ಸಂದರ್ಭದಲ್ಲಿ ಸರ್ಕಾರ ಏನಾದರೂ ಅಂತಹ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರ ಸಲಹೆ ಉಪಯುಕ್ತವಾಗಿದೆ. ಈ ನಿಟ್ಟಿನಲ್ಲಿ ಸಚಿವ ಸಹೋದ್ಯೋಗಿಗಳಾದ ಮಾನ್ಯ ಬಚ್ಚೇಗೌಡರು ತಮ್ಮ ಕ್ಷೇತ್ರದಲ್ಲಿ ಭಾರತ ಪೆಟ್ರೋಲಿಯಂ ಮತ್ತು ಇಂಡಿಯನ್ ಆಯಿಲ್ ಕಂಪನಿಗಳ ಲಾರಿಗಳು ತುಂಬಾ ತಿರುಗಾಡುತ್ತವೆನ್ನುವ ಕಾರಣಕ್ಕಾಗಿ 145 ಲಕ್ಷ ರೂಪಾಯಿಗಳನ್ನು ಕೊಡಿಸಿದ್ದಾರೆ. ಅವರೇ ಸಂಪೂರ್ಣವಾದ ಹಣವನ್ನು ಬರಿಸುತ್ತಿದ್ದಾರೆ. ಆದರೆ ನಾವು ಜಿಲ್ಲಾಪಂಚಾಯಿತಿ ವ್ಯಾಪ್ತಿಯಿಂದ ಅನುಷ್ಠಾನಗೊಳಿಸಿವ ಕೆಲಸ ಮಾಡುತ್ತಿದ್ದೇವೆ. ಹಾಗೆ ಶೇಕಡ 50 ಲಷ್ಟು ಹಣವನ್ನು ಯಾರಾದರೂ ಮುಂದೆ ಬಂದು ಕೊಡುವುದಕ್ಕೆ ತಯಾರಾಗಿದ್ದರೆ ಖಂಡಿತವಾಗಿಯೂ ಇದು ಯೋಗ್ಯ ಮತ್ತು ಉಪಯುಕ್ತವಾದ ಸಲಹೆ. ನಾವು ಜಿಲ್ಲಾಪಂಚಾಯಿತಿವತಿಯಿಂದ ಆ ಕಾರ್ಯ ನಿರ್ವಹಿಸುತ್ತೇನೆಂದು ಮಾನ್ಯ ಅಧ್ಯಕ್ಷರ ಮೂಲಕ ಅರಿಕೆ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಈಗ ಎರಡು ಸಂಸ್ಥೆಗಳು ಮುಂದೆ ಬಂದಿವೆ. ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಬಂದಿರಬಹುದು. ಕಾಡುಮನೆ ಎನ್ನತಕ್ಕ ಹತ್ತಾರು ಗ್ರಾಮಗಳು ಸೇರತಕ್ಕ 13 ಕಿಲೋಮೀಟರ್ ರಸ್ತೆ, ಇನ್ನೊಂದು ಹಾರ್ಲೆ ರಸ್ತೆ 10-12 ಗ್ರಾಮಗಳ ಮೂಲಕ ಹಾದು ಹೋಗತಕ್ಕ ರಸ್ತೆ. ಕಾಡುಮನೆ ರಸ್ತೆಗೆ 20 ಲಕ್ಷ ರೂಪಾಯಿ ಅಂದಾಜು ಮಾಡಿದ್ದಾರೆ. ಅದರಲ್ಲಿ 10ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ

ಮುಂದೆ ಬಂದಿದ್ದಾರೆ. ಅದೇ ರೀತಿ ಹಾರ್ಲೆ ಆ ಭಾಗದಲ್ಲಿ ಒಬ್ಬ ಪ್ಲಾಂಟರ್ ರಸ್ತೆಗೆ ತಗಲತಕ್ಕ ವೆಚ್ಚದಲ್ಲಿ ಅರ್ಧ ವೆಚ್ಚವನ್ನು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಅವರದು ಒಂದು ಕಂಡೀಷನ್ ಎನಿದೆ ಅಂದರೆ, ಒಂದೇ ಸಾರಿ ಸಂಪೂರ್ಣವಾಗಿ ರಸ್ತೆಯನ್ನು ಮಾಡಬೇಕು. ನಾನು ಈ ವಿಚಾರವನ್ನು ಜಿಲ್ಲಾಪಂಚಾಯಿತಿಯಲ್ಲಿ ಪ್ರಸ್ತಾಪ ಮಾಡಿದಾಗ, ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲವೆಂದು ಹಂತ ಹಂತವಾಗಿ ಮಾಡುತ್ತೇವೆಂದು ಜಿಲ್ಲಾಪಂಚಾಯಿತಿಯ ಅಧ್ಯಕ್ಷರು ಹೇಳಿದ್ದರಿಂದ ನಾನು ತಮ್ಮ ಮುಂದೆ ಈ ವಿಚಾರ ಇಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರನ್ನು ನಾನು ಅಭಿನಂದಿಸುತ್ತೇನೆ, ಇಂತಹ ಸಹಯೋಗ ಮಾಡುದ್ದಕ್ಕಾಗಿ. ಪ್ರಾಯಶಃ ಕ್ರಿಯಾ ಯೋಜನೆ ಮುಕ್ತಾಯವಾಗಿರುವುದರಿಂದ ಹೊಸದಾಗಿ ಇವು ಸೇರಿಸುವುದಕ್ಕೆ ತೊಂದರೆಯಾಗಿರಬಹುದೆಂದು ಜಿಲ್ಲಾಪಂಚಾಯಿತಿ ಅಧ್ಯಕ್ಷರು ಹೇಳಿರಬಹುದು. ತಾವು ಹೇಳಿದ ಎರಡು ರಸ್ತೆಯ ಬಗ್ಗೆ ಪತ್ರ ಬರೆದು ಸಲಹೆ ಕಳುಹಿಸಿಕೊಟ್ಟರೆ ಖಂಡಿತವಾಗಿಯೂ ಸರ್ಕಾರದ ವತಿಯಿಂದ ಕೆಲಸವನ್ನು ನಿರ್ವಹಿಸುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳಲ್ಲಿ ಒಂದು ಸಲಹೆ. ರಸ್ತೆ ಇಷ್ಟೊಂದು ಕೆಡುವುದಕ್ಕೆ ಕಾರಣವೇನು? ರಸ್ತೆಗಳನ್ನು ಮಾಡುವುದಕ್ಕೆ ಜವಾಬ್ದಾರಿಯಿಂದ ಹಣವನ್ನು ಖರ್ಚುಮಾಡಿ ಅವುಗಳನ್ನು ರಿಪೇರಿ ಮಾಡಿದರೂ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿರತಕ್ಕ ರಸ್ತೆಗಳು ಬಾಳಿಕೆ ಬಾರದಿರುವುದಕ್ಕೆ ಕಾರಣವೇನೆಂದು ಮೊದಲ ಸರ್ಕಾರ ಯೋಚಿಸಬೇಕು. 10ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆ ಮಾಡಿ 1 ಲಕ್ಷ ಖರ್ಚುಮಾಡಿ ಎಲ್ಲಿ ಡ್ರೈನೇಜ್ ಮಾಡುವುದಿಲ್ಲ ಆ ರಸ್ತೆಗಳು 10 ವರ್ಷ ಬಾಳಿಕೆ ಬರತಕ್ಕ ರಸ್ತೆಗಳಿದ್ದರೂ ಮೂರು ವರ್ಷಕ್ಕೆ ಹಾಳಾಗುತ್ತವೆ. ಇದರಿಂದ ಸರ್ಕಾರಕ್ಕೆ ಹೆಚ್ಚು ಆರ್ಥಿಕ ಹೊರೆಯಾಗುತ್ತದೆ, ಆದ್ದರಿಂದ ಯಾವುದೇ ರಸ್ತೆಯನ್ನು ಡ್ರೈನೇಜ್ ಇಲ್ಲದ ಮಾಡಬಾರದೆಂದು ನನ್ನ ಅಭಿಪ್ರಾಯ. ಜೊತೆಗೆ ಮಾನ್ಯ ಶಿವಕುಮಾರ್‌ರವರು ಹೇಳಿದರು, 1987ನೇ ಇಸವಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ನೀರಾವರಿಗೆ ಸಂಬಂಧಪಟ್ಟ ಕಾಲುವೆ ಮೇಲಿನ ಎಲ್ಲಾ ರಸ್ತೆಗಳನ್ನು ಜಿಲ್ಲಾ ಪರಿಷತ್‌ಗೆ ದಾಖಲೆ ಮೂಲಕ ಹ್ಯಾಂಡ್‌ಒವರ್ ಮಾಡಿದರು. 1987ನೇ ಇಸವಿಯಲ್ಲಿ ದಾಖಲೆ ಮೂಲಕ ಜಿಲ್ಲಾಪರಿಷತ್‌ಗೆ ಹ್ಯಾಂಡ್‌ಒವರ್ ಮಾಡಿದರೂ, ಜಿಲ್ಲಾಪರಿಷತ್‌ನವರು ಒಂದು ರಸ್ತೆಯ ಕೆಲಸವನ್ನು ಇದುವರೆಗೂ ಮಾಡಲಿಲ್ಲ. ಅದಕ್ಕೆ ಕಾರಣ ಏನೆಂದರೆ ನಮಗೆ ಹಣ ಕೊಡಲಿಲ್ಲ. ಆ ರಸ್ತೆಗೂ ನಮಗೂ ಸಂಬಂಧವಿಲ್ಲವೆಂದು ಆ ಫೈಲನ್ನು ಹಾಗೆಯೇ ಇಟ್ಟುಕೊಂಡಿದ್ದರು. ಈಗ ಪುನಃ ಏನು ಮಾಡುತ್ತಿದ್ದಾರೆಂದರೆ ನೀರಾವರಿ ಇಲಾಖೆಗೆ ವಾಪಸ್ಸು ಫೈಲುಗಳನ್ನು ಕೊಡುತ್ತಿದ್ದಾರೆ, ಈಗ ಏನು ಕೆಲಸವಾಗುತ್ತಿದೆ ಅಂದರೆ " ಮದುವೆ ಮಾಡಿದರೆ ಗಂಡು-ಹೆಣ್ಣು ಹೂವು ಎಸೆದಾಡುರ ಹಾಗೆ " ಇಲ್ಲಿ ರಸ್ತೆಗೆ ಸಂಬಂಧಪಟ್ಟ ಫೈಲುಗಳನ್ನು ಎಸೆದಾಡುತ್ತಿದ್ದಾರೆ, ರಸ್ತೆಗಳನ್ನು ಮಾತ್ರ ಮಾಡುತ್ತಿಲ್ಲ. ದಯವಿಟ್ಟು ರಸ್ತೆ ಕೆಲಸವನ್ನು ನೀರಾವರಿ ಇಲಾಖೆಯವರೇ ಮಾಡಲಿಯೆಂದು ಹೇಳಿ. ನೀರಾವರಿ ಇಲಾಖೆಯವರೇ ಮಾಡಬೇಕು, ಸೇತುವೆ ಕಟ್ಟುವ ಕೆಲಸವನ್ನು ನೀರಾವರಿ ಇಲಾಖೆಗೆ ಕೊಟ್ಟು ರಸ್ತೆ ಕೆಲಸವನ್ನು ಜಿಲ್ಲಾಪಂಚಾಯತಿಯವರಿಗೆ ಕೊಟ್ಟರೆ ಅದು ಸರಿಯಾಗುವುದಿಲ್ಲ. ಇಲ್ಲಿ ಪೂರ್ಣ ಕೆಲಸವನ್ನು ಇಲಾಖೆಯವರೇ ಮಾಡಬೇಕು. ತಾವು ದಯವಿಟ್ಟು ಇದನ್ನು ಗಮನಕ್ಕೆ ತೆಗೆದುಕೊಂಡು ಸೂಕ್ತ ತೀರ್ಮಾನಕ್ಕೆ ಬರವುದು ಒಳ್ಳೆಯದು. ಡ್ರೈನೇಜ್ ಇಲ್ಲದೆ ರೋಡ್ ಮಾಡಿದರೆ ನೀವು ಎಷ್ಟೇ ಸಾಹಸ ಮಾಡಿದರೂ ರಸ್ತೆಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ತಾವು ಈ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕಂದು ಮಾನ್ಯ ಸಭಾಧ್ಯಕ್ಷರ ಮೂಲಕ ತಿಳಿಸುತ್ತಿದ್ದೇನೆ. ತಾವು ದಯವಿಟ್ಟು ಗಂಭೀರವಾಗಿ ಈ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, One English author by name mr. Roobart has written in his book saying that Indian roads are bad as of their politicians. ಎಂದು ಬರೆದಿದ್ದರು. ಆದ್ದರಿಂದ ತಾವೇನು ಈಗ ಸಲಹೆ ಕೊಟ್ಟಿದ್ದೀರಿ...

ಅಧ್ಯಕ್ಷರು : ಯಾರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದಿರಿ.?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ಮಾನ್ಯ ಅಧ್ಯಕ್ಷರೆ, ಅಂದರೆ self Condemnation. ನಾವೆಲ್ಲರೂ ಒಪ್ಪಿಕೊಂಡಹಾಗೆ ಆಯಿತು . Very unfair to others also. ಅದನ್ನು ಈ ಸಂದರ್ಭದಲ್ಲಿ ಕೋಟ್‌ಮಾಡಿ ಇಡೀ ಪೊಲಿಟಿಶಿಯನ್ಸೇ ಹಾಗಿದ್ದಾರೆ ಎಂದರೆ ಬಹುಶಃ ಇಡೀ ದೇಶಕ್ಕೇ ಒಂದು ದೊಡ್ಡ ದುರಂತ ಬಂದಿದೆ ಎಂದು ಇದರ ಅರ್ಥ.

ಶ್ರೀ ಎಂ.ಪಿ. ಪ್ರಕಾಶ್ : ಅದೊಂದು in the lighter vein I said because Mr. Roobart has said it. Of Course, there are good roads also and so also politicians.

ಶ್ರೀ. ವಾಟಾಳ್ ನಾಗರಾಜ್ : ಎಂರಡು ವರ್ಗದವರು ಶೇಕಡ ಎಷ್ಟೆಷ್ಟು ಇದ್ದಾರೆ?

ಶ್ರೀ ಎಂ.ಪಿ. ಪ್ರಕಾಶ್ : ತಾವು ನಿರ್ಣಯ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಾವು ಒಂದು ಸಮಿತಿ ರಚನೆ ಮಾಡಿ ನಾನು ಎನ್‌ಕ್ವಾಯರಿ ಮಾಡಿ ಒಂದು ರಿಪೋರ್ಟ್ ಕೊಡುತ್ತೇನೆ.

ಶ್ರೀ ಬಸವರಾಜ್ ಅಟ್ಟೂರು : ಮಾನ್ಯ ಅಧ್ಯಕ್ಷರು, ರಸ್ತೆಗಳು ಸಾಕಷ್ಟು ದುಸ್ಥಿತಿಯಲ್ಲಿವೆ. ಗ್ಯಾಂಗ್‌ಮ್ಯಾನ್‌ಗಳನ್ನು ತೆಗೆದುಕೊಳ್ಳುತ್ತಿಲ್ಲ. ನನ್ನ ಅಭಿಪ್ರಾಯ ಏನಿದೆ ಅಂದರೆ ಸಾಕಷ್ಟು ಹಣ ಖರ್ಚುಮಾಡಿದರೂ ರಸ್ತೆಗಳ ರಿಪೇರಿಯಾಗುವುದು ತೊಂದರೆಯಾಗುತ್ತಿದೆ. ಗ್ಯಾಂಗ್‌ಮ್ಯಾನ್‌ಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು, ನೀರಾವರಿ ಇಲಾಖೆಯ ರಸ್ತೆಗಳನ್ನು ಅವರೇ ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ಮಾಡುವ ರಸ್ತೆಗಳನ್ನು ಅವರೇ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು : ಆಯಿತಿ ತಾವು ಕೂಡಿ. ಮಾನ್ಯ ರಾಮಸ್ವಾಮಿಯವರೆ , ತಮ್ಮ ಪ್ರಶ್ನೆ 5(91)ಕ್ಕೆ ಇಡೀ ರಾಜ್ಯದ ಒಟ್ಟು ಮಾಹಿತಿ ಕೇಳಿದ್ದೀರಿ. ಮಾನ್ಯಮಂತ್ರಿಗಳು ಸಹ ಸಮಯ ಕೇಳಿದ್ದಾರೆ. ಮಾನು ಅವರಿಗೆ ಸಮಯವನ್ನು ಕೊಟ್ಟಿದ್ದೇನೆ. ತಮಗೆ ಉತ್ತರವನ್ನು ತರಿಸಿ ಕೊಡುತ್ತಾರೆ.

ಸವದತ್ತಿ ತಾಲ್ಲೂಕಿನಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆ.

1 : ಶ್ರೀ ಚಂದ್ರಶೇಖರ ಎಂ. ಮಾಮನಿ (ಪರಸಗಡ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವದತ್ತಿ ತಾಲ್ಲೂಕ್ಕಿನಲ್ಲಿ ಕುಡಿಯುವ ನೀರಿಗಾಗಿ ಗ್ರಾಮಾಂತರ ನೀರು ಸರಬರಾಜು, ಕೆರು ನೀರು ಸರಬರಾಜು ಮತ್ತು ಕೊಳವೆ ಬಾವಿ ಮುಂತಾದ ಯೋಜನೆಗಳ ಮುಖಾಂತರ ವ್ಯವಸ್ಥೆ ಮಾಡಿರುವ ಗ್ರಾಮಗಳ ಹೆಸರು ಮತ್ತು ಪಟ್ಟಿಯನ್ನು ಒದಗಿಸುವುದು. (ಸವದತ್ತಿ ತಾಲ್ಲೂಕಿನಲ್ಲಿ ಸರ್ಕಾರದಿಂದ ವಿವಿಧ ಯೋಜನೆಗಳ ಅಡಿಯಲ್ಲಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿರುವ ಒಟ್ಟು ಹಳ್ಳಿಗಳ ಸಂಖ್ಯೆ ಎಷ್ಟು?)